ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.
ನ್ಯಾಯಾಲಯ, ಚಿಕ್ಕಮಗಳೂರು.

ದಿನಾಂಕಃ 29.01.2022

**ಸಿ.ಸಿ.ನಂ. 1839 : 2021**

ಪಿರ್ಯಾದುದಾರರು: ರಾಜ್ಯ ಸರ್ಕಾರದ ಪರವಾಗಿ ನಗರ ಠಾಣಾ ಪೊಲೀಸರು,

ವಿರುದ್ಧ

ಆರೋಪಿತರು: 1. ಅಫ್ರೋಜ್ ಬಿನ್ ಇಬ್ರಾಹಿಂ
ವಯಸ್ಸುಃ 30 ವರ್ಷ, ಚಾಲಕ ವೃತ್ತಿ,
ವಾಸಃ ರಾಮನಹಳ್ಳಿ, ಹನುಮಂತನಗರ,
ಚಿಕ್ಕಮಗಳೂರು.

2. ಅಫಲ್ ಬಿನ್ ಲೇಟ್ ಮುನಾವರ್ ಪಾಷಾ,
ವಯುಸ್ಸುಃ 26 ವರ್ಷ, ಕೂಲಿ ಕೆಲಸ,
ವಾಸಃ ಸಂತೆ ಮಾರ್ಕೆಟ್, ತಮಿಳು ಕಾಲೋನಿ,
ಚಿಕ್ಕಮಗಳೂರು.

## ದೋಷಾರೋಪಣೆ

ಶ್ರೀ ವೀರಣ್ಣ ಸೋಮಶೇಖರ, ಬಿ.ಕಾಂ., ಎಲ್.ಎಲ್.ಬಿ., ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿ, ಚಿಕ್ಕಮಗಳೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕ 29.03.2021 ರಂದು ರಾತ್ರಿ 10-30 ಗಂಟೆ ಸಮಯದಲ್ಲಿ ಚಿಕ್ಕಮಗಳೂರು ನಗರದ ತಮಿಳು ಕಾಲೋನಿಯಲ್ಲಿರುವ ಅಕ್ಸಾ ಮಸೀದಿಯ ಹತ್ತಿರ ಆರೋಪಿತರಾದ ನೀವು ಏಕ ಉದ್ದೇಶದಿಂದ ಹಣದ ವಿಚಾರದಲ್ಲಿ ಚಾಸಾ-1 ಸಾದಿಕ್ ರವರೊಡನೆ ಗಲಾಟೆ ತೆಗೆದು, ಆ ವೇಳೆಗೆ 1 ನೇ ಆರೋಪಿಯಾದ ನೀನು ಚಾಸಾ-1 ರವರನ್ನು ಕುರಿತು ಕೊಟ್ಟಿರುವ

ಹಣವನ್ನು ವಾಪಸ್ ಕೊಡು ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಸ್ಥಳದಲ್ಲಿ ಅವರನ್ನು ಅವಮಾನ ಮಾಡಿದ್ದು ಆ ಕಾರಣ ನೀವು ಭಾ.ದಂ.ಸಂ.ಕಲಂ.504 ಸಹವಾಚ 34 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದೂಃ

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಏಕ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು, ಕೈಗಳಿಂದ ಚಾಸಾ-1 ರವರ ಎಡಭುಜಕ್ಕೆ ಬಲ ಪಕ್ಕೆಲುಬಿಗೆ ಮತ್ತು ಬಲಕೆನ್ನೆಗೆ ಹೊಡೆದು ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು ಆ ಕಾರಣ ನೀವು ಭಾ.ದಂ.ಸಂ.ಕಲಂ.323 ಸಹವಾಚ 34 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದೂಃ

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಏಕ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು, ಅವರಿಗೆ ಕೊಲೆ ಬೆದರಿಕೆ ಹಾಕಿದ್ದು ಆ ಮೂಲಕ ನೀವು **ಭಾ.ದಂ.ಸಂ.ಕಲಂ.506 ಸಹ ಕಲಂ 34** ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ದೋಷಾರೋಪಣೆ ಹೊರಿಸಲಾಗಿದೆ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

ಸಹಿ
( ವೀರಣ್ಣ ಸೋಮಶೇಖರ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.